ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆನಂದರಾವ್ ವೃತ್ತ, ಬೆಂಗಳೂರು – 560009

ಸಂಖ್ಯೆ: ಟಿಸಿಎನ್/362/2020–21 ದಿನಾಂಕ:23–09–2020.

**ಸುತ್ತೋಲೆ**

ವಿಷಯ:– ನೇತ್ರಾಧಿಕಾರಿ ಹುದ್ದೆಯಿಂದ ಹಿರಿಯ ನೇತ್ರಾಧಿಕಾರಿ ಹುದ್ದೆಗೆ ಕೌನ್ಸೆಲಿಂಗ್ ಮೂಲಕ ಸ್ಥಾನಪನ್ನ ಪದೋನ್ನತಿ ನೀಡಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ:–
1. ನಿರ್ದೇಶನಾಲಯದ ಅಂತಿಮ ಜೇಷ್ಠತಾ ಪಟ್ಟಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಟಿ.ಸಿ.ಎನ್/362/19–20 ದಿನಾಂಕ: 11/02/2020.
2. ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿ ದಿನಾಂಕ:26/08/2020
3. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯರು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ ಮತ್ತು ನಿಯಮ 2011. (ಕಾಲಕಾಲಕ್ಕೆ ತಿದ್ದುಪಡಿಯಾದಂತೆ)

******

ನೇತ್ರಾಧಿಕಾರಿ ಹುದ್ದೆಯಿಂದ ಹಿರಿಯ ನೇತ್ರಾಧಿಕಾರಿ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ಹೊಂದುವ ಅರ್ಹತಾ ನೌಕರರ ಪಟ್ಟಿ ಅನುಬಂಧ–1 ರಲ್ಲಿರುವ ನೇತ್ರಾಧಿಕಾರಿ ಹುದ್ದೆಯಿಂದ ಹಿರಿಯ ನೇತ್ರಾಧಿಕಾರಿಗಳ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡಲು ಕೌನ್ಸೆಲಿಂಗ್‌ನ್ನು ದಿನಾಂಕ:28/09/2020 ರಂದು ಬೆಳಗ್ಗೆ 10.00 ಘಂಟೆಗೆ ನಿಗಧಿಪಡಿಸಲಾಗಿದೆ. <28-9-20>

ಆದ ಕಾರಣ ಅರ್ಹತಾ ಪಟ್ಟಿ ಅನುಬಂಧ–1 (ಹೈದ್ರಬಾದ್ ಕರ್ನಾಟಕ ಭಾಗ ಹೊರತುಪಡಿಸಿದ) ರಲ್ಲಿರುವ ಎಲ್ಲಾ ನೌಕರರುಗಳು ಪದೋನ್ನತಿ ಸಂಬಂಧ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ವೈದ್ಯರು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ ಮತ್ತು ನಿಯಮ 2011 ರ ಪ್ರಕಾರ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಕೆಳಕಂಡಂತೆ ಪಟ್ಟಿಯಲ್ಲಿರುವ ಎಲ್ಲಾ ನೌಕರರು **ದಿನಾಂಕ:28/09/2020 ರಂದು ಬೆಳಗ್ಗೆ 10.00 ಘಂಟೆಗೆ ಕೃಷ್ಣಹಾಲ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು,** ಇಲ್ಲಿಗೆ ತಪ್ಪದೇ ಹಾಜರಾಗಲು ಸೂಚಿಸಿದೆ. ಒಂದು ವೇಳೆ ಕೌನ್ಸೆಲಿಂಗ್‌ಗೆ ಹಾಜರಾಗದೇ ಇದ್ದ ಪಕ್ಷದಲ್ಲಿ ಉಲ್ಲೇಖ(3) ರ ನಿಯಮ (13) ರನ್ವಯ ಸುಮೋಟೂ (Sumoto) ಆಧಾರದಲ್ಲಿ ಸ್ಥಳ ನೇಮಕಾತಿಯನ್ನು ಇಲಾಖಾ ಮುಖಾಂತರ ನಿಗಧಿಪಡಿಸಿ ಆದೇಶಿಸಲಾಗುವುದು.

**ವಿಶೇಷ ಸೂಚನೆ:–**

1. ಹಿರಿಯ ನೇತ್ರಾಧಿಕಾರಿಗಳ ಪದೋನ್ನತಿಗಾಗಿ ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ http://karunadu.karnataka.gov.in/hfw ನಲ್ಲಿ ಪ್ರಕಟಿಸಲಾಗುವುದು.
2. ಸಮಾಲೋಚನೆಗೆ ಹಾಜರಾಗುವ ನೌಕರರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಹಾಗೂ ಎರಡು ಗಜ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು.
3. ಇಲಾಖೆಯ ಗುರುತಿನ ಚೀಟಿ ಜೊತೆಗೆ ಹಾಜರಾಗಲು ಸೂಚಿಸಿದೆ.

2)

4. **ಸಮಾಲೋಚನೆಗೆ ಹಾಜರಾದ ಸಂದರ್ಭದಲ್ಲಿ ಮೊಬೈಲ್ ಬಳಕೆಯನ್ನು ನಿರ್ಬಂದಿಸಲಾಗಿದೆ. ಯಾವುದೇ ದೂರವಾಣಿ ಕರೆಯನ್ನು ಮಾಡುವುದು ಹಾಗೂ ಗಣ್ಯ ವ್ಯಕ್ತಿಗಳ ಒತ್ತಡ ತರುವುದು ಕಂಡು ಬಂದಲ್ಲಿ ಅಂತಹ ಸಿಬ್ಬಂದಿಯ ವಿರುದ್ಧ ತಕ್ಷಣ ಜಾರಿಗೆ ಬರುವಂತೆ ಶಿಸ್ತು ಕ್ರಮ ಜರುಗಿಸಿ ಪದೋನ್ನತಿ ರದ್ದು ಪಡಿಸಲಾಗುವುದು.**

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

**ಇವರಿಗೆ:**

ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
2. ನಿರ್ದೇಶಕರು ಹಾಗೂ ಡೀನ್, ಸ್ವಾಯುತ್ತ ಸಂಸ್ಥೆಗಳು __________ ಜಿಲ್ಲೆ.
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ __________ ಜಿಲ್ಲೆ.
4. ಜಿಲ್ಲಾ ಶಸ್ತ್ರಚಿಕಿತ್ಸಕರು __________ ಜಿಲ್ಲೆ.
5. ವೈದ್ಯಕೀಯ ಅಧೀಕ್ಷಕರು __________ ಜಿಲ್ಲೆ.
6. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು __________
7. ಎಲ್ಲಾ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ / ಘಟಕ / ಸಮುದಾಯ ಆರೋಗ್ಯ ಕೇಂದ್ರ __________
8. ಆದೇಶ ಪ್ರತಿ / ಕಛೇರಿ ಪ್ರತಿ.

## ಅನುಬಂಧ – 1

### ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರ ನೇತ್ರಾಧಿಕಾರಿ ಹುದ್ದೆಯಿಂದ ಹಿರಿಯ ನೇತ್ರಾಧಿಕಾರಿ ಹುದ್ದೆಗೆ ಪದೂನ್ನತಿಗಾಗಿ ಕೌನ್ಸಿಲಿಂಗ್ ಗೆ ಹಾಜರಾಗುವ ನೌಕರರ ಅಂತಿಮ ಪಟ್ಟಿ

| ಕ್ರಮ ಸಂಖ್ಯೆ | ಜೇ.ಪ. ಕ್ರ.ಸಂ | ನೌಕರರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಸಹಿ |
|---|---|---|---|
| 1 | 2 | 3 | 4 |
| 1 | 17 | ಸವಿತಾ ಕುಲಕರ್ಣಿ<br>ಸ.ಆ.ಕೇಂದ್ರ ಕಿಕ್ಕೇರಿ, ಕೆ.ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ | |
| 2 | 20 | ಬಸವಂತಪ್ಪ. ಹೆಚ್ ಅಡಗಲ್<br>ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹಿರೇಕೆರೂರ, ಹಾವೇರಿ ಜಿಲ್ಲೆ | |
| 3 | 26 | ಸ್ಯೆಯದ್ ಉಸ್ಮಾನ್<br>ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಭೋಧಕ ಆಸ್ಪತ್ರೆ, ರಾಯಚೂರು | |
| 4 | 31 | ಬಿ.ಎಲ್ ಶಂಕರಾಚಾರ್ಯ<br>ಸಾ.ಆ ಜಯನಗರ, ಬೆಂಗಳೂರು | |
| 5 | 208 | ಸಿ. ಚನ್ನಯ್ಯ<br>ಪ್ರಾ.ಆ.ಕೇಂದ್ರ ಹಿರೇನಲ್ಲೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ | |
| 6 | 209 | ಜಯಶೇಖರ ಮೂರ್ತಿ ಬಿ.ಸಿ<br>ಪ್ರಾ.ಆ.ಕೇಂದ್ರ ಉಮ್ಮತ್ತೂರು, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ | |
| 7 | 222 | ಹೆಚ್. ಮಂಜಣ್ಣ<br>ಸ.ಆ.ಕೇಂದ್ರ ಸಿರಿಗೆರೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ | |

22/9

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು.

## ಹಿರಿಯ ನೇತ್ರಾಧಿಕಾರಿಗಳ ಮಂಜೂರು, ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ಮಾಹಿತಿ.

| ಕ್ರಸಂ | ಜಿಲ್ಲೆ | ಸಂಸ್ಥೆಯ ಹೆಸರು | ಮಂಜೂರು | ಕಾರ್ಯನಿರತ | ಖಾಲಿ |
|---|---|---|---|---|---|
| 1 | ಚಿತ್ರದುರ್ಗ | ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ | 1 | 0 | 1 |
| 2 | ಮೈಸೂರು | ಮೈಸೂರು ವೈದ್ಯಕೀಯ ವಿಜ್ಞಾನ ಸಂಶೋಧನಾ ಸಂಸ್ಥೆ ಮೈಸೂರು | 1 | 0 | 1 |
| 3 | ಕೊಡಗು | ಕೊಡಗು ವೈದ್ಯಕೀಯ ವಿಜ್ಞಾನ ಸಂಶೋಧನಾ ಸಂಸ್ಥೆ ಕೊಡಗು | 1 | 0 | 1 |
| 4 | ಉಡುಪಿ | ಜಿಲ್ಲಾ ಆಸ್ಪತ್ರೆ ಉಡುಪಿ | 1 | 0 | 1 |
| 5 | ಗುಲ್ಬರ್ಗ | ಜಿಲ್ಲಾ ಆಸ್ಪತ್ರೆ ಕಲಬುರಗಿ | 1 | 0 | 1 |
| 6 | ರಾಯಚೂರು | ರಾಯಚೂರು ವೈದ್ಯಕೀಯ ವಿಜ್ಞಾನ ಸಂಶೋಧನಾ ಸಂಸ್ಥೆ ರಾಯಚೂರು | 1 | 0 | 1 |
| 7 | ಬೀದರ್ | ಜಿಲ್ಲಾ ಆಸ್ಪತ್ರೆ ಬೀದರ್ | 1 | 0 | 1 |
| 8 | ಹಾವೇರಿ | ಜಿಲ್ಲಾ ಆಸ್ಪತ್ರೆ ಹಾವೇರಿ | 1 | 0 | 1 |
| 9 | ಗದಗ | ಜಿಲ್ಲಾ ಆಸ್ಪತ್ರೆ ಗದಗ | 1 | 0 | 1 |
| 10 | ಬಿಜಾಪುರ | ಜಿಲ್ಲಾ ಆಸ್ಪತ್ರೆ ಬಿಜಾಪುರ | 1 | 0 | 1 |
| ಒಟ್ಟು ಖಾಲಿ ಹುದ್ದೆಗಳು | | | | | **10** |

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
ಬೆಂಗಳೂರು